

بِسْمِ اللّٰهِ الرَّحْمَنِ الرَّحِيمِ

# ಬೈಅತ್ ನಿಬಂಧನೆಗಳ ಯಥಾರ್ಥ ಅನುಸರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 11-08-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್‌ನಲ್ಲಿ ಸೇರುವ ಪ್ರತಿಯೊಬ್ಬ ಅಹ್ಮದಿ ತನ್ನ ಆಧ್ಯಾತ್ಮಿಕ, ನೈತಿಕ, ಜ್ಞಾನ ಸಂಬಂಧವಾದ ಮತ್ತು ವಿಶ್ವಾಸಕ್ಕೆ ಸಂಬಂಧಿಸಿದ ಸ್ಥಿತಿಯನ್ನು ಉತ್ತಮಪಡಿಸಲು ಒಂದು ಪ್ರತಿಜ್ಞೆ ಮಾಡುತ್ತಾನೆ. ಇಂದಿನ ಕಾಲದಲ್ಲಿ ಅಲ್ಲಾಹನು ನಮಗೆ ಎಂ.ಟಿ.ಎ. ಎಂಬ ಅನುಗ್ರಹವನ್ನು ದಯಪಾಲಿಸಿದ್ದಾನೆ. ಜಮಾಅತಿನ ವಿವಿಧ ಕಾರ್ಯಕ್ರಮಗಳು, ಜಲ್ಸಗಳು, ಖುತ್‌ಬಗಳು ಮತ್ತು ಎಲ್ಲದಕ್ಕಿಂತ ಮಿಗಿಲಾಗಿ **ಆಲಮಿ ಬೈಅತ್** ಎಂ.ಟಿ.ಎ. ಮತ್ತು ಇಂಟರ್‌ನೆಟ್ ಮೂಲಕ ಲಕ್ಷಗಟ್ಟಲೆ ಅಹ್ಮದಿಯರಿಗೆ ತಲುಪುತ್ತದೆ ಮತ್ತು ಅವರು ಅದರಲ್ಲಿ ಭಾಗವಹಿಸುತ್ತಾರೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿಗೆ, ಅವನು ಜನ್ಮತಃ ಅಹ್ಮದಿಯಾಗಿದ್ದರೂ ಬೈಅತ್ ಮೂಲಕ ಅಹ್ಮದಿಯಾಗಿದ್ದರೂ 'ನಮಗೆ ಬೈಅತ್ ಪ್ರತಿಜ್ಞೆ ಬಗ್ಗೆ ತಿಳಿದಿಲ್ಲ' ಎಂದು ಹೇಳಲು ಸಾಧ್ಯವಿಲ್ಲ.

ಆದುದರಿಂದ ಆವಶ್ಯಕವಾಗಿರುವುದೇನೆಂದರೆ ನಾವು ಬೈಅತ್ ಮಾಡಿದ ನಂತರ ಪ್ರತಿಜ್ಞೆಯ ವಿವರಗಳನ್ನು ತಿಳಿಯಲು ಪ್ರಯತ್ನ ಮಾಡಬೇಕು. ಮತ್ತು ಬೈಅತ್ ಪ್ರತಿಜ್ಞೆಯನ್ನು ನಮ್ಮ ಮುಂದೆ ಇರಿಸಬೇಕು. ಬೈಅತ್ ಶರತ್ತುಗಳಲ್ಲಿ ವಿವರಿಸಲಾದ ನೈತಿಕ ಗುಣಗಳನ್ನು ಉತ್ತಮಗೊಳಿಸುವ ಶರತ್ತುಗಳನ್ನಾದರೂ ನಮ್ಮ ಮುಂದೆ ಇರಿಸುವುದಾದರೆ ನಮ್ಮ ನೈತಿಕ ಗುಣದ ಮಟ್ಟದಲ್ಲಿಯೂ, ಸಾಮಾಜಿಕ ಸಂಬಂಧಗಳಲ್ಲೂ, ವಾಣಿಜ್ಯ ಸಂಬಂಧಗಳಲ್ಲೂ ಮತ್ತು ದೈನಂದಿನ ಕೊಡು-ಕೊಳ್ಳುವಿಕೆಗಳಲ್ಲೂ ಕುಟುಂಬಕ್ಕೆ ಸಂಬಂಧಿಸಿದ ವಿಷಯಗಳಲ್ಲಿಯೂ ಅಸಾಧಾರಣವಾದ ಉತ್ತಮ ಪರಿವರ್ತನೆ ಮತ್ತು ಔನ್ನತ್ಯ ಉಂಟಾಗಲು ಸಾಧ್ಯವಿದೆ. ಆದರೆ ನಮ್ಮಲ್ಲಿ ಅನೇಕರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮ್ಮಲ್ಲಿ ಕಾಣಲು ಬಯಸಿದ ಉನ್ನತ ಮಟ್ಟಗಳಿಂದ ಬಹಳ ದೂರದಲ್ಲಿಯೇ ಇದ್ದಾರೆ. ಇದಕ್ಕೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬೈಅತ್ ನಿಬಂಧನೆಗಳ ಮೂಲಕ ಯಾವ ವಿಷಯಗಳ ಕಡೆಗೆ ನಮ್ಮ ಗಮನ ಹರಿಸಿದ್ದಾರೆಯೋ ಅವುಗಳಲ್ಲಿ ಕೆಲವು ಈ ಕೆಳಗಿನವುಗಳಾಗಿವೆ.

ಸುಳ್ಳು ಹೇಳಬಾರದು, ದೌರ್ಜನ್ಯ ಮಾಡಬಾರದು, ವಿಶ್ವಾಸ ವಂಚನೆ ಮಾಡಬಾರದು, ಭಾವೋದ್ರೇಕಗಳಿಂದ ಸೋಲಿಸಲ್ಪಡಬಾರದು. ಭಾವೋದ್ರೇಕಗಳಿಗೆ ಒಳಗಾಗಿ ಸಾಮಾನ್ಯವಾಗಿ ದೇವ ಸೃಷ್ಟಿಗಳಲ್ಲಿ ಯಾರಿಗೂ ಮುಸ್ಲಿಮರಿಗೆ ವಿಶಿಷ್ಟವಾಗಿಯೂ ನಾಲಗೆಯಿಂದಾಗಲಿ ಕೈಗಳಿಂದಾಗಲಿ ಕಷ್ಟಕೊಡಬಾರದು. ಅಹಂಭಾವದಿಂದ ವರ್ತಿಸದೆ ವಿನಯಭಾವವನ್ನು ಹೊಂದಬೇಕು. ಯಾವಾಗಲೂ ಸುಸ್ವಭಾವಗಳನ್ನು ಪ್ರಕಟಿಸುತ್ತಾ ಜೀವಿಸಬೇಕು. ಮನುಷ್ಯ ಕುಲಕ್ಕೆ ಪ್ರಯೋಜನ ಉಂಟುಮಾಡಲು ಪ್ರಯತ್ನಿಸುತ್ತಿರಬೇಕು.

ನಾವು ಈ ವಿಷಯಗಳ ಕಡೆಗೆ ಗಮನ ಹರಿಸುವುದಾದರೆ ನಾನು ಹೇಳಿದ ಹಾಗೆ ನಾವು ನಮ್ಮ ನೈತಿಕ ಮಟ್ಟವನ್ನು ವರ್ಧಿಸಬಹುದಾಗಿದೆ. ಆದರೆ ನಾವು ಪರಿಶೋಧಿಸುವುದಾದರೆ ನಮ್ಮವರಲ್ಲಿ ಬಹಳಷ್ಟು ಸಂಖ್ಯೆಯ ಜನರು, ಅವರು ಬೈಅತ್ ಪ್ರತಿಜ್ಞೆ ಮಾಡಿದ್ದರೂ ಈ ವಿಷಯಗಳನ್ನು ಅನುಷ್ಠಾನಕ್ಕೆ ತರುತ್ತಾ ಇಲ್ಲ. ನಮ್ಮ ಸ್ಥಿತಿ ಹೇಗಿದೆ ಎಂದರೆ ನಾವು ನಮ್ಮ ಹಕ್ಕುಗಳನ್ನು ತ್ಯಜಿಸಿ ಅಥವಾ ನಾವು ನಮ್ಮನ್ನು ಸ್ವತಃ ಕಷ್ಟಕ್ಕೆ ಗುರಿಪಡಿಸಿ ಉನ್ನತ ಸ್ವಭಾವ ಗುಣಗಳನ್ನು ಪ್ರಕಟಿಸುವ ಆವಶ್ಯಕತೆ ಇಲ್ಲದಿರುವಾಗ, ಬಹಳ ಬೊಬ್ಬೆ ಹಾಕಿ ಹೇಳತ್ತಾ ಇರುತ್ತೇವೆ, ಉನ್ನತ ಸ್ವಭಾವ ಗುಣಗಳನ್ನು ನಾವು ಖಂಡಿತವಾಗಿಯೂ ಪ್ರಕಟಿಸಬೇಕು ಹಾಗೆ ಮಾಡದವರು ಬಹಳ ದೌರ್ಜನ್ಯ ಮಾಡುವವರಾಗಿದ್ದಾರೆ ಎಂದು. ಆದರೆ ನಾವು ಸ್ವತಃ ನೇರವಾಗಿ ಯಾವುದಾದರೂ ರೀತಿಯಲ್ಲಿ ಹಾನಿಯನ್ನು ಅನುಭವಿಸುವ ಸಂದರ್ಭ ತಲೆದೋರಿದರೆ ನಮ್ಮಲ್ಲಿ ಬಹುತೇಕ ಜನರು ಈ ಸುಸ್ವಭಾವಗಳನ್ನು ಮರೆತು ಬಿಡುತ್ತೇವೆ. ಖಝಾ (ನ್ಯಾಯ ತೀರ್ಮಾನಕ್ಕೆ) ಸಂಬಂಧಿಸಿದ ಕೆಲವು ಪ್ರಕರಣಗಳು ನನ್ನ ಮುಂದೆ ಬಂದಾಗ ನಾನು ಕಂಡಿದ್ದೇನೆ, ಯಾವುದು ಸತ್ಯ ಯಾವುದು ಸುಳ್ಳು ಎಂದು ಸಾಬೀತುಗೊಳಿಸುವುದಕ್ಕೆ ಬದಲಾಗಿ, ತಮಗೆ ಅರ್ಹವಾದ ಹಕ್ಕುಗಳನ್ನು ಮಾತ್ರ ಪಡೆಯುವುದಕ್ಕೆ ಬದಲಾಗಿ, ಎಂತಹ ಹಠವನ್ನು ಪ್ರದರ್ಶಿಸಲಾಗುತ್ತಿದೆ ಎಂದರೆ ಅದನ್ನು ಕಾಣುವಾಗ ನನಗೆ ಆಶ್ಚರ್ಯವಾಗುತ್ತದೆ. ಆದುದರಿಂದ ಅಹ್ಮದಿ ವಕೀಲರಾಗಲಿ ಅಥವಾ ವ್ಯಾಜ್ಯಕ್ಕೆ ಸಂಬಂಧಿಸಿದ ಎರಡು ವಿಭಾಗದ ಜನರಾಗಲಿ, ಅವರು ತಮ್ಮ ಬೈಅತ್ ಪ್ರತಿಜ್ಞೆ ಮತ್ತು ಅಲ್ಲಾಹನ ಭಯಕ್ಕೆ ತಮ್ಮ ಸ್ವಾರ್ಥ ಹಿತಾಸಕ್ತಿಗಳ ಮೇಲೆ ಆದ್ಯತೆ ನೀಡಬೇಕು. ಅಂತಹ ಸಂದರ್ಭಗಳಲ್ಲಿ ಒಬ್ಬ ಸತ್ಯವಿಶ್ವಾಸಿ ಮಾಡಬೇಕಾದುದೇನೆಂದರೆ ಜಗಳಗಳನ್ನು ದೀರ್ಘಕಾಲ ಕೊಂಡೊಯ್ಯುವುದಕ್ಕೆ ಬದಲಾಗಿ, ತಮ್ಮ ಹಠದಲ್ಲಿ ಸ್ಥಿರವಾಗಿ ಮುಂದುವರಿಯುವುದಕ್ಕೆ ಬದಲಾಗಿ, ಅಲ್ಲಾಹನ ಸಂಪ್ರೀತಿ ಗಳಿಸಲು ತಮ್ಮಲ್ಲಿ ಮೃದುತ್ವವನ್ನು ಉಂಟುಮಾಡಿ ತಮ್ಮ ಪ್ರಕರಣವನ್ನು ಜಮಾಅತಿನ ನಿಝಾಮ್ ಅಥವಾ ಖಝಾ ಮುಂದೆ ತರಬೇಕು. ಮಾಡಬೇಕಾದ ಪ್ರಯತ್ನವೇನೆಂದರೆ ನಾವು ಪರಸ್ಪರ ಸಹೋದರರು, ನಾವು ತಪ್ಪು ಗ್ರಹಿಕೆಗಳನ್ನೂ ಉಚಿತ ದೂರುಗಳನ್ನೂ ಅನುಚಿತ ದೂರುಗಳನ್ನೂ ದೂರ ಸರಿಸಿ ಪರಸ್ಪರ ಪ್ರೀತಿ ಮತ್ತು ಸ್ನೇಹಭರಿತರಾಗಿ ಜೀವಿಸಬೇಕು ಎಂದು.

ಆದರೆ ಹಕ್ಕು ನೀಡಬೇಕಾದ ಕಕ್ಷಿ ಮತ್ತು ಹಕ್ಕು ಪಡೆಯಬೇಕಾದ ಕಕ್ಷಿ ಇಬ್ಬರೂ ಹಟಮಾರಿಗಳಾಗಿದ್ದರೆ ವ್ಯಾಜ್ಯದ ತೀರ್ಪನ್ನು ಜಮಾಅತಿನ ನಿಝಾಮ್ ಆಗಲಿ ಅಥವಾ ಖಝಾ ಆಗಲಿ ಅಥವಾ ದೇಶದ ನ್ಯಾಯಾಲಯವೇ ಆಗಲಿ ತೀರ್ಪು ನೀಡಿದರೂ, ಅವರೆಲ್ಲರೂ ನ್ಯಾಯನಿಷ್ಠವಾಗಿ ತೀರ್ಪು ನೀಡಿದರೂ ಸಹ ವ್ಯಾಜ್ಯವು ಕೊನೆಗೊಳ್ಳುವುದಿಲ್ಲ. ಹಕ್ಕನ್ನು

ನೀಡಬೇಕಾದವನು ಹಕ್ಕನ್ನು ಕಸಿದುಕೊಳ್ಳುತ್ತಾನೆ. ಅವನು ತೀರ್ಪನ್ನು ಅಂಗೀಕರಿಸುವುದಿಲ್ಲ. ಅಂತಹ ಜನರು ನನಗೆ ಬರೆಯುತ್ತಾರೆ: 'ನಮ್ಮ ಮೇಲೆ ಬಹಳ ಅನ್ಯಾಯ ಮಾಡಲಾಗಿದೆ. ತಾವು ಸ್ವತಃ ಈ ಪ್ರಕರಣವನ್ನು ನೋಡಿರಿ' ಎಂದು ಬರೆಯುತ್ತಾರೆ. ಇಂತಹ ದೂರುಗಳು ಎಂದೂ ಕೊನೆಗೊಳ್ಳುವುದಿಲ್ಲ.

ಆದುದರಿಂದ ಜಗಳಗಳನ್ನು ನಾವು ಅತ್ಯುತ್ತಮ ರೀತಿಯಲ್ಲಿ ಪರಿಹರಿಸಲು ಹಠದ ಮನೋಭಾವವನ್ನು ತ್ಯಜಿಸಬೇಕಾಗಿದೆ. ಕೆಲವು ಸಾರಿ ಒಬ್ಬನಿಗೆ ಹಕ್ಕು ಸಿಗಬೇಕಾಗಿದ್ದರೂ ಜಗಳವನ್ನು ಕೊನೆಗೊಳಿಸಲಿಕ್ಕೋಸ್ಕರ, ಯಾರು ಹಕ್ಕನ್ನು ನೀಡಬೇಕಾಗಿದೆಯೋ ಅವನಿಗೆ ಸೌಲಭ್ಯ ನೀಡುವ ಆವಶ್ಯಕತೆ ಇರುತ್ತದೆ. ಕೆಲವು ಸಾರಿ ಹಕ್ಕನ್ನು ಸ್ವಲ್ಪ ಮಟ್ಟಿಗೆ ತ್ಯಜಿಸಲೂ ಬೇಕಾಗುತ್ತವೆ. ಈ ವಿಷಯದ ಬಗ್ಗೆ ಅಲ್ಲಾಹನು ಪವಿತ್ರ ಖುರ್ಆನ್‌ನಲ್ಲಿ ಹೀಗೆ ಉಪದೇಶಿಸಿದ್ದಾನೆ: **ವಇನ್ ಕಾನ ಝೂ ಉಸ್‌ರತಿನ್ ಫನಝಿರತುನ್ ಇಲಾ ಮಯ್‌ಸರತಿನ್. ವಅನ್ ತಸದ್ದಖೂ ಖೈರಲ್ಲಕುಮ್ ಇನ್ ಕುನ್‌ತುಮ್ ತಅ್‌ಲಮೂನ್.** (ಸಾಲ ಗ್ರಾಹಕರಲ್ಲಿ) ಯಾರಾದರೂ ಕಷ್ಟದಲ್ಲಿದ್ದರೆ (ಆತನಿಗೆ) ಅನುಕೂಲವಾಗುವ ವರೆಗೆ ಸಮಯವಕಾಶ ನೀಡಬೇಕಾಗಿದೆ. ಅದನ್ನು (ಆತನಿಗೆ) ದಾನವಾಗಿ ಬಿಡುವುದಾದರೆ ಅದು ನಿಮಗೆ ಇನ್ನೂ ಗುಣಕರ– ನೀವು ಗ್ರಹಿಸಬಲ್ಲವರಾದರೆ. (ಪವಿತ್ರ ಖುರ್ಆನ್ 2:281).

ಅಲ್ಲಾಹನು ಹೇಳುವುದೇನೆಂದರೆ ನಿಮಗೂ ಇಂತಹ ಸ್ಥಿತಿ ಸಂಭವಿಸಬಹುದಾಗಿದೆ. ನೀವು ಸಹ ಕಷ್ಟಕ್ಕೊಳಗಾಗಬಹುದು ಎಂದು. ಎಲ್ಲದಕ್ಕಿಂತಲೂ ಹೆಚ್ಚು ಗಮನಾರ್ಹವಾದುದೇನೆಂದರೆ ಅಲ್ಲಾಹನು ನಮಗೆ ಅನೇಕ ವಿಷಯಗಳಿಗೆ ಸಂಬಂಧಿಸಿ ವಿನಾಯತಿ ನೀಡುತ್ತಿದ್ದಾನೆ. ಸರ್ವಶಕ್ತನಾದ ಅಲ್ಲಾಹನು ನಮ್ಮ ತಪ್ಪು ಕೆಲಸಗಳಿಗೆ ಸಂಬಂಧಿಸಿ ನಮ್ಮನ್ನು ಹಿಡಿಗೂಡಲು ತೊಡಗುವುದಾದರೆ ನಮಗೆ ಜೀವಿತವೇ ನಷ್ಟವಾಗುವುದು. ಆದುದರಿಂದ ಆವಶ್ಯಕವಾದುದೇನೆಂದರೆ ನಾವು ಪರಸ್ಪರ ಮಾಡುವ ವ್ಯವಹಾರದಲ್ಲಿ ಮೃದುವಾಗಿಯೂ ಸೌಲಭ್ಯ ನೀಡುವ ರೀತಿಯಲ್ಲೂ ವರ್ತಿಸಬೇಕು. ಇದೊಂದು ಸೈದ್ಧಾಂತಿಕ ಮಾರ್ಗದರ್ಶನವಾಗಿದೆ. ನಮ್ಮ ದೈನಂದಿನ ವ್ಯವಹಾರಗಳಲ್ಲೂ, ವ್ಯಾಪಾರಗಳಲ್ಲೂ, ಸಾಲ ಕೊಡುವ ಮತ್ತು ಪಡೆಯುವ ಸಂದರ್ಭಗಳಲ್ಲೂ ಈ ತತ್ವವನ್ನು ಯಾವಾಗಲೂ ನೆನಪಿನಲ್ಲಿಡಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸತ್ಯವಿಶ್ವಾಸಿಗಳಿಗೆ ಪದೇ ಪದೇ ಹೀಗೆ ಉಪದೇಶಿಸಿದ್ದಾರೆ: ನೀವು ಲೋಕದಲ್ಲಿ ಮೃದುವಾಗಿಯೂ ಕಾರುಣ್ಯವಂತರಾಗಿಯೂ ವರ್ತಿಸುವಿರಾದರೆ ಆಕಾಶದಲ್ಲಿ ಅಲ್ಲಾಹನು ಸಹ ನಿಮ್ಮೊಂದಿಗೆ ದಯಾಭರಿತನಾಗಿ ವರ್ತಿಸುವನು. ನಾವು ಈ ಉಪದೇಶ ಪ್ರಕಾರ ವರ್ತಿಸುವುದಿಲ್ಲವಾದರೆ ನಾವು ನೆನಪಿಡಬೇಕು, ನಮ್ಮ ಕರ್ಮಗಳ ಲೆಕ್ಕಾಚಾರ ಮುಂದೆ ಒಂದು ದಿನ ಅಲ್ಲಾಹನು ನಡೆಸಲಿರುವನು. ಆ ಸಮಯದಲ್ಲಿ ಅಲ್ಲಾಹನು ಕೇವಲ ನ್ಯಾಯವನ್ನು ಮಾತ್ರ ಪರಿಗಣಿಸಿ ತೀರ್ಪು ನೀಡುವುದಾದರೆ, ನಮಗೆ ರಕ್ಷಣೆ ಹೊಂದಲು ಬಹಳ ಕಷ್ಟವಾಗಬಹುದು. ಆದುದರಿಂದ ಅಲ್ಲಾಹನಿಂದ ಕ್ಷಮೆಯನ್ನೂ ಕಾರುಣ್ಯವನ್ನೂ ಔದಾರ್ಯವನ್ನೂ ಗಳಿಸಲಿಕ್ಕೋಸ್ಕರ ಲೋಕದಲ್ಲಿ ನಾವು ಇತರರೊಡನೆ ಮಾಡುವ ವ್ಯವಹಾರಗಳಲ್ಲಿ ಮೃದುವಾಗಿಯೂ ದಯೆಯಿಂದಲೂ ವರ್ತಿಸಬೇಕು. ನಾವು ಕಾಠಿಣ್ಯ ಭಾವದಿಂದಲೂ, ಹಟಮಾರಿತನದಿಂದಲೂ ಕೇವಲ ನಮ್ಮ ಹಕ್ಕುಗಳನ್ನು ಗಳಿಸುವ ಚಿಂತೆಯಿಂದಲೂ ವರ್ತಿಸಬಾರದು.

ನಾವು ಪವಿತ್ರ ಖುರ್ಆನಿನ ಈ ಸುವರ್ಣ ಮಾರ್ಗದರ್ಶನವನ್ನು ನೆನಪಿನಲ್ಲಿಟ್ಟುಕೊಂಡು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಉಪದೇಶವನ್ನು ನಮ್ಮ ಮುಂದೆ ಇರಿಸುವುದಾದರೆ ಶಾಂತಿಭರಿತ ಸಮಾಜದ ನಿರ್ಮಾಣವಾಗುವುದು. ಆತಂಕದಾಯ ಸ್ಥಿತಿ ಹರಡಲಾರದು. ವಿರೋಧಗಳು ದೀರ್ಘಕಾಲ ಮುಂದುವರಿಯಲಾರದು. ತೀರ್ಪುಗಳನ್ನು ಜಾರಿಗೊಳಿಸುವ ಜಮಾಅತಿನ ವಿಭಾಗಗಳು ಸಹ ಜಗಳಗಳನ್ನು ಪರಿಹರಿಸುವ ಕೆಲಸದಲ್ಲಿ ಮಾತ್ರ ಸಮಯ ವಿನಿಯೋಗಿಸದೆ ಯಾವುದಾದರೂ ರಚನಾತ್ಮಕ ಯೋಜನೆಗಳನ್ನು ರೂಪಿಸಲು ಅವರಿಗೆ ಸಮಯ ಸಿಗುವುದು. ನನ್ನ ಸಮಯ ವ್ಯರ್ಥವಾಗುವುದು ಸಹ ನಿವಾರಿಸಲ್ಪಡುವುದು. ನಾನು ಕೆಲವು ಸಾರಿ ಪ್ರಕರಣಗಳನ್ನು ಪರಿಶೋಧಿಸಿ ಎರಡು ಪಕ್ಷಗಳ ಜನರಿಗೆ ಉತ್ತರ ನೀಡುತ್ತೇನೆ. ಆದರೆ ಕೆಲವರಿಗೆ ನನ್ನ ಉತ್ತರ ಅವರ ಇಚ್ಛೆ ಪ್ರಕಾರವಾಗಿರದಿದ್ದರೆ ಅವರು ತಮ್ಮ ಮಾತಿನಲ್ಲಿ ಹಟದಿಂದಿರುತ್ತಾರೆ. ನಾವು ಹೇಳುವುದೇ ಸರಿ ಎಂದು ಹಟದಿಂದ ವಾದಿಸಿ ತೀರ್ಪು ನಮ್ಮ ಪರವಾಗಿರಬೇಕು, ನಾವು ಯಾವುದೇ ಸೌಲಭ್ಯ ಎದುರು ಪಕ್ಷಕ್ಕೆ ಕೊಡಲಾರೆವು ಎಂದು ಹೇಳುತ್ತಾರೆ. ನಾನು ಸ್ಪಷ್ಟವಾಗಿ ಬರೆದು ತಿಳಿಸಿದ ನಂತರ ಸಹ ಕೆಲವು ಸಾರಿ ಅತ್ಯಂತ ಹಟಮಾರಿತನದಿಂದ ಮೂರನೇ, ನಾಲ್ಕನೇ ತಿಂಗಳ ನಂತರ ಸಹ ಬರೆಯುತ್ತಾರೆ: ನಾವು ನಮ್ಮ ಪ್ರಕರಣದ ಬಗ್ಗೆ ತಮಗೆ ಬರೆದಿದ್ದೆವು. ನಾವು ಹಕ್ಕು ಹೊಂದಿರುವವರಾಗಿದ್ದೇವೆ. ನೀವು ತೀರ್ಪನ್ನು ಪುನಃ ಪರಿಶೀಲಿಸಿ ನಮ್ಮ ಹಕ್ಕು ನಮಗೆ ಕೊಡಿಸಿರಿ ಎಂದು ಬರೆಯುತ್ತಾರೆ.

ಒಂದು ಪಕ್ಷದವರ ಯೋಚನೆ ಪ್ರಕಾರ ಅವರಿಗೆ ಹಕ್ಕು ದೊರಕಬೇಕಾಗಿದ್ದರೂ ತೀರ್ಪು ಅದಕ್ಕೆ ವಿರುದ್ಧವಾಗಿದ್ದರೆ, ಖಝಾ ವಿಭಾಗದ ವಿರುದ್ಧ ಅಥವಾ ಖಾಝಿಯ ವಿರುದ್ಧ ದೋಷಾರೋಪಣೆ ಮಾಡಲಾಗದು. ಕೆಲವು ಜನರು ಹೀಗೆ ದೋಷಾರೋಪಣೆ ಮಾಡುವ ಅಭ್ಯಾಸ ಹೊಂದಿರುತ್ತಾರೆ. ಯಾವುದಾದರೂ ತೀರ್ಪಿನಲ್ಲಿ ಅಸ್ಪಷ್ಟತೆ ಇದ್ದರೆ ಅಥವಾ ವಾದಿ ಪ್ರತಿವಾದಿಗಳಿಗೆ ತೀರ್ಪು ಅಸ್ಪಷ್ಟವಾಗಿದ್ದರೆ, ಅದರ ಬಗ್ಗೆ ಅಪೇಕ್ಷೆ ಸಲ್ಲಿಸಿದಾಗ ನಾನು ಸಹ ಪ್ರಕರಣದ ಫೈಲ್‌ಗಳನ್ನು ತರಿಸಿ ನೋಡುತ್ತೇನೆ. ಆದರೆ ಬಹುತೇಕ ತೀರ್ಪುಗಳು ಸರಿಯಾಗಿಯೇ ಇರುತ್ತವೆ. ಕೆಟ್ಟ ಯೋಚನೆ ಮತ್ತು ಕೆಟ್ಟ ಸಂಶಯಗಳ ಕಾರಣ ಹೃದಯಗಳಲ್ಲಿ ಸಂದೇಹಗಳು ತಲೆದೋರುತ್ತವೆ. ಆದುದರಿಂದ ಕೆಟ್ಟ ಸಂಶಯಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಬೇಕು. ಏಕೆಂದರೆ ಕೆಟ್ಟ ಸಂಶಯ ಇನ್ನೊಂದು ಕೆಟ್ಟ ಕೆಲಸಕ್ಕೆ ಮಾರ್ಗವನ್ನು ತೆರೆಯುತ್ತದೆ.

ಖಝಾದಲ್ಲಿ ದಾಖಲಾಗುವ ಪ್ರಕರಣಗಳು ಅವು ಕೊಡು–ಕೊಳ್ಳುವಿಕೆಗೆ ಸಂಬಂಧಿಸಿರಲಿ, ವ್ಯಾಪಾರಕ್ಕೆ ಸಂಬಂಧಿಸಿರಲಿ, ಕುಟುಂಬಕ್ಕೆ ಸಂಬಂಧಿಸಿರಲಿ ನೇರವಾಗಿ ಅಥವಾ ಪರೋಕ್ಷವಾಗಿ ಹಣಕಾಸಿಗೆ ಸಂಬಂಧಿಸಿರುತ್ತದೆ. ಪತಿ ಪತ್ನಿಯರ ಜಗಳಗಳು ಮಹರ್‌ಗೆ ಸಂಬಂಧಿಸಿರುತ್ತದೆ ಅಥವಾ ಒಡವೆ ಸಾಮಗ್ರಿಗಳಿಗೆ

ಸಂಬಂಧಿಸಿರುತ್ತವೆ. ಆದುದರಿಂದ ಪ್ರತಿಯೊಂದು ಜಗಳದಲ್ಲಿ ಸಾಂಪತ್ತಿಕ ವಿಷಯ ಒಳಗೊಂಡಿರುತ್ತದೆ. ಸೌಲಭ್ಯ ನೀಡುವುದು ಸ್ವಲ್ಪ ಮಟ್ಟಿಗೆ ಜಾರಿಯಲ್ಲಿ ಸಹ ಇದೆ. ಕುಟುಂಬಕ್ಕೆ ಸಂಬಂಧಿಸಿದ ಜಗಳಗಳಲ್ಲಿ ಹೆಚ್ಚಾಗಿ ಹಣದ ನಗದಿ ಪಾವತಿ ಒಳಗೊಂಡಿರುತ್ತದೆ. ಮಹ್‌ರ್ ಎಂಬುದು ಪತಿಯು ನೀಡಬೇಕಾದ ಸಾಲದ ಹಣವಾಗಿರುತ್ತದೆ. ಇತರ ಸಾಲದ ಹಣದ ಪಾವತಿಗೆ ಸಂಬಂಧಿಸಿ ಖಝಾ ವಿಭಾಗ ಪರಿಸ್ಥಿತಿಯನ್ನು ಗಮನಿಸಿ ಕಂತುಗಳನ್ನು ನಿಶ್ಚಯಿಸಿದರೆ ಅದರ ಬಗ್ಗೆಯೂ ಆಕ್ಷೇಪಿಸುತ್ತಾರೆ. ಅಹ್ಮದಿಯರಾದ ನಾವು ಶಾಂತಿಭರಿತ ಸಮಾಜದ ಬಗ್ಗೆ ಲೋಕದೊಂದಿಗೆ ಹೇಳುತ್ತಾ ಇರುವಾಗ ನಾವು ನಮ್ಮ ಪ್ರತಿಯೊಂದು ವ್ಯವಹಾರದಲ್ಲಿ ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಪ್ರಯತ್ನ ಮಾಡಬೇಕಾಗಿದೆ.

ಸತ್ಯವಿಶ್ವಾಸಿಗಳು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿಕೊಡುವುದರಲ್ಲಿ ಚುರುಕಾಗಿರಬೇಕು. ಅನೇಕ ಪ್ರಕರಣಗಳಲ್ಲಿ ನಾವು ಹಕ್ಕುಗಳನ್ನು ಪಡೆದುಕೊಳ್ಳುವವನ ಮನೋಭಾವವನ್ನು ಮೃದುಗೊಳಿಸುತ್ತಾ ಇದ್ದರೂ ಹಕ್ಕನ್ನು ನೀಡಬೇಕಾದವನ ವರ್ತನೆ ಹೇಗಿರುತ್ತದೆ ಎಂದರೆ ಅದು ಸಮಸ್ಯೆ ಬಗೆಹರಿಸಲ್ಪಡಲು ಪೂರಕವಾಗಿರುವುದಿಲ್ಲ. ಅನಂತರ ಅವರು, ನಮ್ಮೊಂದಿಗೆ ಮೃದುವಾಗಿ ವರ್ತಿಸಿಲ್ಲ ಎಂದು ದೂರುತ್ತಾರೆ.

ಸುಂದರವಾದ ಸಮಾಜ ವ್ಯವಸ್ಥೆಯ ನಿರ್ಮಾಣದ ಬಗ್ಗೆ ವಿವರಿಸುತ್ತಾ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದ ಉಪದೇಶಗಳಲ್ಲಿ ಕೆಲವನ್ನು ನಿಮ್ಮ ಮುಂದೆ ಇರಿಸುತ್ತೇನೆ. ಪರಸ್ಪರ ವ್ಯವಹಾರಗಳಲ್ಲಿ ಮೃದುವಾಗಿ ವರ್ತಿಸುವವರ ಪರವಾಗಿ ಪ್ರಾರ್ಥಿಸುತ್ತಾ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಹೇಳಿದರು: ಖರೀದಿ–ವಿಕ್ರಯ ಮಾಡುವ ಸಂದರ್ಭದಲ್ಲಿಯೂ ಸಾಲ ಮರುಪಾವತಿಯನ್ನು ಆವಶ್ಯಪಡುವ ಸಂದರ್ಭದಲ್ಲಿಯೂ ಮೃದುವಾಗಿ ವರ್ತಿಸುವವನ ಮೇಲೆ ಅಲ್ಲಾಹನು ಕರುಣೆದೋರಲಿ.

ಇನ್ನೊಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು: ಸಾಲ ಪಡೆದು ಕೊಂಡವನ ಕೈಯಲ್ಲಿ ಹಣವಿಲ್ಲದೆ ಇರುವಾಗ ಸಾಲ ಮರುಪಾವತಿ ಮಾಡಲು ಸಮಯವಕಾಶ ನೀಡುವವನಿಗೆ ಅಥವಾ ಸಾಲವನ್ನು ಬಿಟ್ಟುಕೊಟ್ಟು ಕ್ಷಮಿಸುವವನಿಗೆ, ಖಿಯಾಮತ್ ದಿನದಂದು ಅಲ್ಲಾಹನ ನೆರಳಿನ ಹೊರತು ಬೇರೆ ಯಾವ ನೆರಳೂ ಇಲ್ಲದಿರುವಾಗ ಅಲ್ಲಾಹನು ತನ್ನ ಸಿಂಹಾಸನದ ಕೆಳಗೆ ಅವನಿಗೆ ನೆರಳು ನೀಡುವನು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಸಹ ಹೇಳಿದರು: ಒಬ್ಬ ವ್ಯಾಪಾರಿ ಜನರಿಗೆ ಸಾಲ ಕೊಡುತ್ತಿದ್ದನು. ಸಾಲ ಪಡೆದವರಲ್ಲಿ ಯಾರದಾದರೂ ಕೈಯ್ಯಲ್ಲಿ ಹಣವಿಲ್ಲದಿರುವಾಗ ಆ ವ್ಯಾಪಾರಿ ಸಾಲ ವಸೂಲು ಮಾಡುವ ತನ್ನ ನೌಕರರೊಂದಿಗೆ ಹೇಳುತ್ತಿದ್ದನು: ಆತನನ್ನು ಬಿಟ್ಟು ಬಿಡಿರಿ, ಪ್ರಾಯಶಃ ಅಲ್ಲಾಹನು ನಮ್ಮ ತಪ್ಪುಗಳನ್ನು ಸಹ ಬಿಟ್ಟು ಬಿಡುವನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ವ್ಯಾಪಾರಿಯ ಈ ವರ್ತನೆಯ ಕಾರಣದಿಂದ ಅಲ್ಲಾಹನು ಅವನ ತಪ್ಪುಗಳನ್ನು ಕಡೆಗಣಿಸಿದನು. ಆದುದರಿಂದ ಯಾರಿಗೆ ಸಾಧ್ಯವಿದೆಯೋ ಅವರು ಜಗಳ, ಕೋರ್ಟ್ ವ್ಯವಹಾರಗಳಲ್ಲಿ ಅನಾವಶ್ಯಕ ಧನವ್ಯಯ ಮಾಡದೆ ಸಾಲ ಪಡೆದವನಿಗೆ ಸಮಯವಕಾಶ ನೀಡಬೇಕು.

ಆದರೆ ಇಸ್ಲಾಮ್ ಕೇವಲ ಸಾಲ ನೀಡುವವರೊಂದಿಗೆ ಮತ್ತು ಹಕ್ಕುಗಳನ್ನು ಪಡೆದುಕೊಳ್ಳುವವರೊಂದಿಗೆ ಮಾತ್ರ ಸೌಲಭ್ಯಗಳನ್ನು ನೀಡಿರೆಂದು ಹೇಳುತ್ತಾ ಇಲ್ಲ. ಇಸ್ಲಾಮ್ ಎಂತಹ ಧರ್ಮವೆಂದರೆ ಅದು ಸಮಾಜದ ಪ್ರತಿಯೊಂದು ವಿಭಾಗದೊಂದಿಗೆ ತನ್ನ ಕರ್ತವ್ಯಗಳನ್ನು ಈಡೇರಿಸುವ ಬಗ್ಗೆ ಗಮನ ಹರಿಸುತ್ತದೆ. ಆ ಮೂಲಕ ಹೃದಯಗಳಲ್ಲಿರುವ ದ್ವೇಷಭಾವನೆ ಹೊರಗೆ ಹೋಗುವುದು ಮತ್ತು ಶಾಂತಿ ಸ್ಥಾಪಿತವಾಗುವುದು. ಆದುದರಿಂದ ಯಾರು ಅನ್ಯರಿಗೆ ಅವರ ಹಕ್ಕುಗಳನ್ನು ನೀಡಲಿಕ್ಕಿದೆಯೋ ಅವರಿಗೆ ಸಹ ಬಹಳ ಒತ್ತಿಹೇಳಿ ಉಪದೇಶಿಸುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್ ಶರತ್ತುಗಳಲ್ಲಿ ಹೀಗೆ ಸಹ ಹೇಳಲಾಗಿದೆ: ಶಾಂತಿಭಂಗ ಮಾಡುವುದರಿಂದ ರಕ್ಷಿಸಿಕೊಳ್ಳಲು ಪ್ರಯತ್ನ ಮಾಡುವೆನು ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುತ್ತಾರೆ: ಒಬ್ಬ ಶ್ರೀಮಂತನು ತಾನು ಪಡಕೊಂಡ ಸಾಲವನ್ನು ಮರುಪಾವತಿ ಮಾಡದೆ ನೆವನಗಳನ್ನು ಹೇಳಿ ತಪ್ಪಿಸಿಕೊಳ್ಳುವುದಾದರೆ ಅದು ದೌರ್ಜನ್ಯ ಕೃತ್ಯವಾಗಿದೆ. ನಿಮ್ಮೊಂದಿಗೆ ಅಂತಹ ವ್ಯಕ್ತಿಯನ್ನು ಬೆನ್ನಟ್ಟಲು ಹೇಳಿದರೆ ನೀವು ಅವರನ್ನು ಬೆನ್ನಟ್ಟಬೇಕು. ಎಂದರೆ ಅವನು ತಾನು ಪಡಕೊಂಡ ಸಾಲವನ್ನು ಮರುಪಾವತಿ ಮಾಡಲು ಅವನನ್ನು ನಿರ್ಬಂಧಿಸಬೇಕು. ಇಂತಹ ಸಂದರ್ಭದಲ್ಲಿ ಯಾವುದೇ ಮೃದುವರ್ತನೆ ಇಲ್ಲ. ಯಾವುದೇ ಸೌಲಭ್ಯ ನೀಡುವ ಆವಶ್ಯಕತೆ ಇಲ್ಲ. ಏಕೆಂದರೆ ಅವನಿಗೆ ಸಾಲ ಮರುಪಾವತಿ ಮಾಡುವ ಶಕ್ತಿ ಇದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಸಹ ಹೇಳಿದ್ದಾರೆ: 'ಸಾಲ ಮರುಪಾವತಿ ಮಾಡುವ ಬಗ್ಗೆ ನೆವನಗಳನ್ನು ಹೇಳಿ ತಪ್ಪಿಸಿಕೊಳ್ಳುವವನಿಗೆ ಗೌರವಚ್ಯುತಿ ಮತ್ತು ಶಿಕ್ಷೆ ಧರ್ಮಬದ್ಧವಾಗುತ್ತದೆ'. ಆದುದರಿಂದ ಇತರರ ಹಕ್ಕುಗಳನ್ನು ಕಸಿದುಕೊಳ್ಳುವ ಇಂತಹ ಜನರಿಗೆ ಶಿಕ್ಷೆ ನೀಡುವುದು ಜಮಾಅತ್ ನಿಝಾಮಿಗೆ ಕಡ್ಡಾಯವಾಗಿದೆ.

ಖಝಾದ ತೀರ್ಪುಗಳನ್ನು ಅಂಗೀಕರಿಸದವರಿಗೆ ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರದವರಿಗೆ, ಅನ್ಯರ ಹಕ್ಕುಗಳನ್ನು ಕಸಿದುಕೊಳ್ಳುವವರಿಗೆ, ಶಿಕ್ಷೆ ನೀಡಿದರೆ ಆಗ ಅವರು ಅದನ್ನು ವಿರೋಧಿಸಬಾರದು. ನಮ್ಮೊಂದಿಗೆ ಮೃದುವಾಗಿ ಜಮಾಅತ್ ವರ್ತಿಸಿಲ್ಲ ಎಂದು ಗುಲ್ಲೆಬ್ಬಿಸಬಾರದು. ಅಂತಹ ಜನರಿಗೆ ಶಿಕ್ಷೆ ನೀಡುವ ಅಧಿಕಾರವನ್ನು ಅಲ್ಲಾಹನ ಸಂದೇಶವಾಹಕರು ಜಮಾಅತಿನ ನಿಝಾಮಿಗೆ ನೀಡಿದ್ದಾರೆ. ದೇಶದ ನಿಯಮಗಳು ಸಹ ಇಂತಹ ಜನರಿಗೆ ಶಿಕ್ಷೆ ನೀಡುತ್ತದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬಲವಾಗಿ ಮುನ್ನೆಚ್ಚರಿಕೆ ನೀಡುವ ಮತ್ತು ಭಯ ಹುಟ್ಟಿಸುವ ಒಂದು ಉಪದೇಶ ನೀಡಿದ್ದಾರೆ. ಅದು ಹೀಗಿದೆ: ಒಬ್ಬನು ಮರುಪಾವತಿ ಮಾಡುವ ಸಂಕಲ್ಪದಿಂದ ಸಾಲ ಪಡೆದರೆ ಅವನು ಸಾಲ ಮರುಪಾವತಿ ಮಾಡುವಂತೆ

ಅಲ್ಲಾಹನು ಅವನಿಗೆ ಅನುಕೂಲ ಒದಗಿಸುವನು. ಆದರೆ ಹಣವನ್ನು ಅಪಹರಿಸಲು ಅಥವಾ ಹಿಂದಿರುಗಿಸದೆ ಮೋಸ ಮಾಡುವ ಸಂಕಲ್ಪದಿಂದ ಸಾಲವನ್ನು ಪಡೆಯುವುದಾದರೆ ಅಲ್ಲಾಹನು ಅವನನ್ನು ಸಂಕಷ್ಟಕ್ಕೆ ಗುರಿಪಡಿಸುವನು. ಆದುದರಿಂದ ಒಳ್ಳೆಯ ಸಂಕಲ್ಪವಿದ್ದರೆ ಅಲ್ಲಾಹನು ಸಾಲ ಮರುಪಾವತಿಯ ಮಾರ್ಗಗಳನ್ನು ಒದಗಿಸಿಕೊಡುವನು. ಅಥವಾ ಸಾಲ ಕೊಟ್ಟವನ ಹೃದಯದಲ್ಲಿ ಮೃದು ಭಾವನೆ ಉಂಟುಮಾಡುವನು. ಆದರೆ ಸಂಕಲ್ಪವೇ ಕೆಟ್ಟದಾಗಿದ್ದರೆ ಅಲ್ಲಾಹನು ಅಂತಹವನಿಗೆ ಶಿಕ್ಷೆ ನೀಡುವನು. ಒಬ್ಬನು ಸಾಲವನ್ನು ಮರುಪಾವತಿಸದೆ ಮೃತನಾದರೆ ಮತ್ತು ಅವನ ಸ್ವತ್ತು ಮತ್ತು ನಗದುಗಳು ಸಾಲ ತೀರಿಸಲು ಸಾಕಷ್ಟಾಗಿರದಿದ್ದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಂಥವರ ಜನಾಝ ನಮಾಝ್ ನಿರ್ವಹಿಸುತ್ತಿರಲಿಲ್ಲ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು, ಸಾಲ ಮಾಡುವುದರಿಂದ ತನ್ನನ್ನು ರಕ್ಷಿಸಬೇಕೆಂದು ಅಲ್ಲಾಹನನ್ನು ಬೇಡಿಕೊಳ್ಳುತ್ತಿದ್ದರು. ಅವರು ಸಾಲ ಮತ್ತು ಅವಿಶ್ವಾಸವನ್ನು (ಕುಫ್ರ್) ಜೋಡಿಸಿ ಹೇಳುತ್ತಿದ್ದರು. ಒಂದು ಹದೀಸಿನಲ್ಲಿ ಒಬ್ಬ ಸಹಾಬಿ ಹೇಳುತ್ತಾರೆ– ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು 'ಕುಫ್ರ್ ಮತ್ತು ಸಾಲದಿಂದ ರಕ್ಷಣೆ ಪಡೆಯಲು ಅಲ್ಲಾಹನ ಅಭಯ ಯಾಚಿಸುತ್ತೇನೆ' ಎಂದು ಪ್ರಾರ್ಥಿಸುವುದನ್ನು ನಾನು ಆಲಿಸಿದೆ. ಒಬ್ಬ ವ್ಯಕ್ತಿ ವಿನಂತಿಸಿದರು: ಓ ಅಲ್ಲಾಹನ ಸಂದೇಶವಾಹಕರೇ, ಸಾಲದ ವಿಷಯ ಕುಫ್ರ್‌ನೊಂದಿಗೆ ಸಮವಾಗಿಸಲ್ಪಡುವುದೇ? ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೌದು ಎಂದು ಹೇಳಿದರು. ಅದರ ಕಾರಣವೇನೆಂದರೆ ಸಾಲ ಕೇಳುವವನು ಸಾಧ್ಯವಿರುವಷ್ಟು ಮಟ್ಟಿಗೆ ಅದರಿಂದ ರಕ್ಷಣೆ ಪಡೆಯಲು ಅಲ್ಲಾಹನನ್ನು ಬೇಡಿಕೊಳ್ಳಬೇಕಾಗಿದೆ. ಸಾಲವನ್ನು ಪಡೆದರೆ ಅದನ್ನು ಮರುಪಾವತಿ ಮಾಡುವ ಬಗ್ಗೆ ಚಿಂತಿಸುತ್ತಲೂ ಇರಬೇಕಾಗಿದೆ. ಆದುದರಿಂದ ನಮ್ಮ ಜಮಾಅತಿನ ಜನರು ಈ ವಿಷಯದ ಬಗ್ಗೆ ಬಹಳ ಲಕ್ಷ್ಯ ನೀಡುವುದು ಆವಶ್ಯಕವಾಗಿದೆ.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ಸಾಲತೀರಿಸುವ ಒಂದು ಪರಿಹಾರ ಮಾರ್ಗ ಸೂಚಿಸಿದ್ದಾರೆ. ಸಾಲ ಪಡೆದುಕೊಂಡವರು ಅದರ ಪ್ರಕಾರ ವರ್ತಿಸಬೇಕು. ಬಹಳ ಜನರು ತಮ್ಮ ಸಾಲದ ಬಗ್ಗೆ ಬರೆಯುತ್ತಿದ್ದಾರೆ. ಅವರೆಲ್ಲರೂ ಈ ಪರಿಹಾರಮಾರ್ಗ ಬಳಸಿ ನೋಡಬೇಕು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳಿದರು: ಮೊದಲನೆಯದಾಗಿ, ಬಹಳ ಹೆಚ್ಚು ಸಾರಿ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತಾ ಇರಬೇಕು. ಎರಡನೆಯದಾಗಿ, ದುಂದು ವೆಚ್ಚ ಮಾಡುವುದನ್ನು ತ್ಯಜಿಸಬೇಕು. ಬಹುತೇಕ ಜನರು ಸಾಲ ಪಡೆಯುವುದು ದುಂದುವೆಚ್ಚ ಮಾಡಲಿಕ್ಕೋಸ್ಕರವಾಗಿದೆ. ಅವರು ತಮ್ಮ ಆಶಾಭಿಲಾಷೆಗಳನ್ನು ವರ್ಧಿಸುತ್ತಾ ಇರುತ್ತಾರೆ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳಿದ ಮೂರನೆಯ ಪರಿಹಾರ ಮಾರ್ಗ, ಸ್ವಲ್ಪ ಮಾತ್ರ ಹಣ ಲಭಿಸಿದರೂ ಅದನ್ನು ಸಾಲ ತೀರಿಸಲಿಕ್ಕಾಗಿ ಬಳಸಬೇಕು.

ಕೆಲವು ಜನರು ಉತ್ಸಾಹದಿಂದ ಸಾಲ ಪಡೆದು ದುಂದು ವೆಚ್ಚ ಮಾಡುತ್ತಾರೆ. ಮನುಷ್ಯನು ಒಮ್ಮೆ ಸಾಲ ಪಡಕೊಂಡರೆ ಅನಂತರ ಅವನು ಸಾಲದ ಸುಳಿಯಲ್ಲಿ ಸಿಲುಕಿಕೊಳ್ಳುತ್ತಾನೆ. ಆದುದರಿಂದ ಅನಾವಶ್ಯಕ ಆಶೆಗಳಿಂದ ರಕ್ಷಿಸಿಕೊಳ್ಳಬೇಕು. ಕೆಲವು ಅನುಭವ ಇಲ್ಲದ ಯುವಕರು ವ್ಯಾಪಾರ ಪ್ರಾರಂಭಿಸಲು ಸಾಲ ಪಡೆದುಕೊಳ್ಳುತ್ತಾರೆ. ಅವರಿಗೆ ವ್ಯಾಪಾರ ಅನುಭವವಿಲ್ಲದ ಕಾರಣ ಅವರ ವ್ಯಾಪಾರ ಕೊನೆಗೊಳ್ಳುತ್ತದೆ. ಅವರು ಸ್ವತಃ ನಿರ್ಧನರಾಗುತ್ತಾರೆ ಮತ್ತು ಜನರ ಹಣವನ್ನು ತೆಗೆದುಕೊಂಡು ಮುಳುಗಿಸಿ ಬಿಡುತ್ತಾರೆ. ಇಂತಹ ಜನರು ಬಹಳ ಜಾಗರೂಕತೆಯಿಂದ ವರ್ತಿಸಬೇಕು. ಅದೇ ರೀತಿ ಇಂತಹ ಜನರಿಗೆ ಹಣಕೊಟ್ಟು ಅನಂತರ ದೂರು ನೀಡುವುದಕ್ಕೆ ಬದಲಾಗಿ, ವ್ಯಾಜ್ಯ ಹೂಡುವುದಕ್ಕೆ ಬದಲಾಗಿ, ಸಾಲ ನೀಡುವವರು ಮೊದಲೇ ಬಹಳ ಚಿಂತಿಸಿ ಸಾಲ ಕೊಡಬೇಕು. ಒಟ್ಟಾರೆ, ಇವೆಲ್ಲವುಗಳಿಂದ ನಾವು ನಮ್ಮನ್ನು ರಕ್ಷಿಸಿಕೊಳ್ಳಬೇಕು. ಆ ಮೂಲಕ ಒಂದು ಶಾಂತಿ ಸಮೃದ್ಧ ಸಮಾಜ ನಮ್ಮಲ್ಲಿ ಸ್ಥಾಪಿವಾಗಲಿ.

ನಾವು ನಮ್ಮ ಜೀವಿತದಲ್ಲಿ ನೈಜ ಸತ್ಯವಿಶ್ವಾಸಿಯ ವರ್ಣವನ್ನು ಸೃಷ್ಟಿಸುವ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸಲಿ. ನಾವು ಒಂದು ಶಾಂತಿಭರಿತ ಸಮಾಜವನ್ನು ಸ್ಥಾಪಿಸುವವರಾಗೋಣ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮಿಂದ ಪ್ರತೀಕ್ಷಿಸುವ, ಪವಿತ್ರ ಖುರ್‌ಆನ್ ಸಹ ಪ್ರಸ್ತಾಪಿಸಿರುವ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ನಮ್ಮ ಗಮನವನ್ನು ಹರಿಸಿರುವ ಉನ್ನತ ಸ್ವಭಾವಗುಣಗಳ ಉನ್ನತ ಮಟ್ಟವನ್ನು ನಾವು ತಲಪುವಂತೆ ಅಲ್ಲಾಹನು ಅನುಗ್ರಹಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At, Masjid Baithul Futhuh, London. on 11-08-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*: *khutuba.kannada@gmail.com***

**You can find all the Sermons archived at**: www.alislam.org/friday-sermon